ಪ್ರಜಾವಾಣಿ ಶುಕ್ರವಾರ 28/02/2020

# ಕರ್ನಾಟಕ ಗೃಹ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಸೂರ್ಯನಗರ-3 ಮತ್ತು 4ನೇ ಹಂತ, ಬೆಂಗಳೂರು.

ಸಂಖ್ಯೆ: ಕಗೃಮಂ/ಕಾಅ/ಸಕಾಅ/ಸೂ.ನ 3ನೇ ಹಂತ/ಬೆಳ್ಳಿಕೆರೆ/ಬೆ.ಸ/1832/2019–20 ದಿನಾಂಕ: 24.02.2020

## ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮಗಳಲ್ಲಿ (ಗುಂಜೂರು ಕ್ರಾಸ್ ಸಮೀಪದಲ್ಲಿ) ವಸತಿ ಯೋಜನೆಗೆ

## ಬೇಡಿಕೆ ಸಮೀಕ್ಷೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದಲ್ಲಿ 94 ಎಕರೆ ಜಮೀನಿನಲ್ಲಿ ಮಂಡಳಿಯ ವಸತಿ ಉತ್ತಮ ಗುಣಮಟ್ಟದ ನಿವೇಶನ ಮತ್ತು ಮನೆಗಳನ್ನು ಅಭಿವೃದ್ಧಿಪಡಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಸಾರ್ವಜನಿಕರಿಗೆ ಮನೆ/ನಿವೇಶನಗಳ ಹಂಚಿಕೆ ಮಾಡುವ ಸಲುವಾಗಿ **ಬೇಡಿಕೆ ಸಮೀಕ್ಷೆ** ಕೈಗೊಳ್ಳಲಾಗುತ್ತಿದೆ.

ಸದರಿ ಯೋಜನೆಯಲ್ಲಿ ರಸ್ತೆ, ಒಳಚರಂಡಿ ವ್ಯವಸ್ಥೆ, ಬೀದಿ ದೀಪ, ನೀರು ಸರಬರಾಜು, ಇನ್ನಿತರೆ ಉತ್ತಮ ನಾಗರಿಕ ಸೌಕರ್ಯಕ್ಕಾಗಿ ವಾಣಿಜ್ಯ ನಿವೇಶನಗಳು ಮತ್ತು ಶಾಲೆ ಹಾಗೂ ಉದ್ಯಾನವನ ಮುಂತಾದ ಉದ್ದೇಶಗಳಿಗಾಗಿ ನಿವೇಶನಗಳನ್ನು ಮೀಸಲಿರಿಸಲಾಗಿದೆ. ಈ ಯೋಜನೆಯಲ್ಲಿ ಮಂಡಳಿ ನಿಯಮಾವಳಿಗೆ ಅನುಗುಣವಾಗಿ ನಿವೇಶನಗಳನ್ನು ಹೊಂದಲು ಬಯಸುವ ಆಸಕ್ತ ಸಾರ್ವಜನಿಕರು ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬಹುದಾಗಿದೆ.

| ಕ್ರ ಸಂ. | ಸ್ವತ್ತಿನ ವರ್ಗ | ಸ್ವತ್ತುಗಳ ಅಳತೆ ಮೀಟರ್‌ಗಳಲ್ಲಿ | ನೋಂದಣಿ ಶುಲ್ಕ ರೂ.ಗಳಲ್ಲಿ | ಆರಂಭಿಕ ಠೇವಣಿ ರೂ.ಗಳಲ್ಲಿ | ಅರ್ಜಿಗಳ ವಿತರಣೆಗೆ ಪ್ರಾರಂಭದ ದಿನಾಂಕ | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|---|---|
| 1 | EWS | 6x9 | 300/- | 10,000/- | 28.02.2020 | 31.03.2020 |
| 2 | LIG | 9x12 | 500/- | 20,000/- | | |
| 3 | MIG | 9x15 | 1,000/- | 30,000/- | | |
| 4 | HIG-I | 12x18 | 1,500/- | 50,000/- | | |
| 5 | HIG-II | 15x24 | | 75,000/- | | |

**ವಿಶೇಷ ಸೂಚನೆ: ನಿವೇಶನಗಳಿಗೆ ಮಂಡಳಿ ವತಿಯಿಂದ ನಿಗದಿಪಡಿಸಿದ ಅಂದಾಜು ದರ ಪ್ರತಿ ಚ.ಅಡಿಗೆ ರೂ. 1500/– (ಪ್ರತಿ ಚ.ಮೀಟರ್‌ಗೆ ರೂ. 16,146/–)**

### ಅರ್ಜಿಗಳ ನೋಂದಣಿಗೆ ನಿಯಮ ಮತ್ತು ಷರತ್ತುಗಳು :

1. ಈ ಅಧಿಕೃತ ಪ್ರಕಟಣೆಯನ್ನು ನಿಖರ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಕಟಿಸಲಾಗಿದೆ.
2. ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕ ರೂ. 100/– ಪಾವತಿ ಮಾಡಿ, ಅರ್ಜಿಗಳನ್ನು ಸೂರ್ಯನಗರ 3ನೇ ಹಂತದ ಕಛೇರಿಯಿಂದ ಹಾಗೂ ಕೆಳಕಂಡ ಬ್ಯಾಂಕ್ ಶಾಖೆಗಳಿಂದ ಪಡೆಯತಕ್ಕದ್ದು.

| Sl. No. | Name of the Bank & Branch | Account No. & IFSC Code |
|---|---|---|
| 1 | Corporation Bank, S C Road Branch & Chandapura Branch, Bangalore | 510101002828811 |
| 2 | Axis Bank, Jayanagar 4th Block Branch, Whitefield Branch & Varthur Branch, Bangalore | 05201010200380348 |

3. ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಸೇರಿಸಿ ಒಟ್ಟು ಮೊತ್ತದ ಡಿ.ಡಿ.ಯನ್ನು Housing Commissioner, Karnataka Housing Board, Bangalore (Payable at Bangalore) ಇವರ ಹೆಸರಿನಲ್ಲಿ ಪಡೆದು, ನಿಗದಿತ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಮೇಲೆ ತಿಳಿಸಿರುವ ಬ್ಯಾಂಕುಗಳಲ್ಲಿ ಸಲ್ಲಿಸಬಹುದು.
4. ಸ್ವತ್ತುಗಳನ್ನು ಪ್ರವರ್ಗಗಳಲ್ಲಿ ಮೀಸಲಾತಿಯನ್ವಯ ಕಾಯ್ದಿರಿಸಿ ಹಂಚಿಕೆ ಮಾಡಲಾಗುವುದು. ಆಯಾ ಪ್ರವರ್ಗವಾರು ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು (SC, ST, Def-Ex. Ser, Cen Govt., St. Govt, Sin Ctzn, Phy-H) ಸಂಬಂಧಿಸಿದ ದೃಢೀಕೃತ ದಾಖಲಾತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
5. ನಿವೇಶನ/ಮನೆಗಳನ್ನು ಒಂದೇ ಇಡಗಂಟಿನ (Outright sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
6. ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದ ಸಾಮಾನ್ಯ ನಿವಾಸಿಯಾಗಿರಬೇಕು. (ವಾಸಸ್ಥಳ ದೃಢೀಕರಣ ಪತ್ರ) ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಅಥವಾ ನೋಟರಿರವರಿಂದ ಪ್ರಮಾಣೀಕರಿಸಿ ಸಲ್ಲಿಸುವುದು.
7. ಅರ್ಜಿದಾರರು ಕರ್ನಾಟಕ ಗೃಹ ಮಂಡಳಿ ಅಥವಾ ಇನ್ನಿತರೆ ಯಾವುದೇ ಸ್ಥಳೀಯ ಸಂಸ್ಥೆ/ಪ್ರಾಧಿಕಾರದಿಂದಾಗಲೀ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿ ಅಫಿಡವಿಟ್ ಸಲ್ಲಿಸುವುದು.
8. ಆರ್ಥಿಕ ದುರ್ಬಲ ವರ್ಗದ ನಿವೇಶನಗಳಿಗೆ ಅರ್ಜಿ ಸಲ್ಲಿಸುವವರು ತಮ್ಮ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದ ಅರ್ಜಿದಾರರು ರೂ. 32,000/– ಮತ್ತು ನಗರ ಪ್ರದೇಶದ ಅರ್ಜಿದಾರರು ವಾರ್ಷಿಕ ವರಮಾನ ರೂ. 87,600/– ಮೀರದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರರವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು.
9. ಬೇಡಿಕೆ ಸಮೀಕ್ಷೆಯಲ್ಲಿ ಉತ್ತಮ ಬೇಡಿಕೆ ಬಂದಲ್ಲಿ ಮಾತ್ರ ಸದರಿ ಯೋಜನೆಯನ್ನು ಕೈಗೊಳ್ಳಲಾಗುವುದು. ಇಲ್ಲವಾದಲ್ಲಿ ಅರ್ಜಿದಾರರಿಗೆ ಪಾವತಿಸುವ ನೋಂದಣಿ ಶುಲ್ಕವನ್ನು ಉಳಿಸಿಕೊಂಡು ಆರಂಭಿಕ ಠೇವಣಿಯನ್ನು ಮರುಪಾವತಿಸಲಾಗುವುದು.
10. ಸಾರ್ವಜನಿಕರ ಸಮ್ಮುಖದಲ್ಲಿ ಲಾಟರಿ ಪ್ರಕ್ರಿಯೆ ನಡೆಸುವ ಮೂಲಕ ಮನೆ/ನಿವೇಶಗಳನ್ನು ಹಂಚಿಕೆ ಮಾಡಲಾಗುವುದು ಹಾಗೂ ಸದರಿ ಹಂಚಿಕೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿರುತ್ತದೆ.
11. ಕರ್ನಾಟಕ ಗೃಹ ಮಂಡಳಿ 1983ರ ಹಂಚಿಕೆ ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
12. ಅರ್ಜಿದಾರರು ಮುಂದಿನ ಪರಾಮರ್ಶೆಗಾಗಿ ಎಲ್ಲಾ ಪತ್ರ ವ್ಯವಹಾರಗಳ ಪ್ರತಿಗಳನ್ನು ತಮ್ಮಲ್ಲಿಟ್ಟುಕೊಂಡು ಪತ್ರ ವ್ಯವಹಾರಗಳಲ್ಲಿ ನೋಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ **www.karnatakahousing.com** ಹಾಗೂ ಅಧಿಕಾರಿಗಳ ಮೊಬೈಲ್ ಸಂಖ್ಯೆ: ಕಾರ್ಯಪಾಲಕ ಅಭಿಯಂತರರು **9448070226**, ಸಹಾಯಕ ಕಾರ್ಯಪಾಲಕ ಅಭಿಯಂತರರು: **9448373762**, ಸಹಾಯಕ ಅಭಿಯಂತರರು: **6360725726**, ವಿಷಯ ನಿರ್ವಾಹಕರು: **9739135363** ಸಂಪರ್ಕಿಸಬಹುದು.

ಸಹಿ/–
**ಕಾರ್ಯಪಾಲಕ ಅಭಿಯಂತರರು,**
**ಸೂರ್ಯನಗರ-3 & 4ನೇ ಹಂತ,**
**ಕರ್ನಾಟಕ ಗೃಹ ಮಂಡಳಿ, ಬೆಂಗಳೂರು**

ವಾಸಾಸಂಇ/ಸಿಂಪ/2607/2019–20

Scanned with CamScanner